## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## ಎಸ್.ಸಿ ಸಂಖ್ಯೆ– 105/2025

| | | | |
|---|---|---|---|
| **ಸಾಕ್ಷಿದಾರನ ಹೆಸರು** | : ಮಂಜುಳಾ | | **ಪಿ.ಡಬ್ಲ್ಯೂ–** 9 |
| **ಗಂಡನ ಹೆಸರು** | : ಮಂಜುನಾಥ | | **ಸಿ.ಡಬ್ಲ್ಯೂ–** 15 |
| **ವಯಸ್ಸು** | : 35 ವರ್ಷ | | |
| **ಉದ್ಯೋಗ** | : ಹೋಟೆಲ್ ನಲ್ಲಿ ಕೆಲಸ | | |
| **ವಾಸಸ್ಥಳ** | : ಕಲ್ಯಾಣಗಿರಿ, ಮೈಸೂರು. | | |

**ಸಾಕ್ಷಿಯನ್ನು ಈ ದಿನ ದಿಃ25.07.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

**1.** ಮೈಸೂರಿನ ಕಲ್ಯಾಣ ಗಿರಿಯ ಕೆಎಸ್ ಸಿಬಿ ಸ್ಲಂ ಕ್ವಾಟ್ರಸ್ ನಲ್ಲಿ ವಾಸವಿದ್ದೇನೆ. ಮೃತ ಮುದಸಿರ್ ನ ಪರಿಚಯ ಇದೆ. ಮೃತ ಮುದಸಿರ್ ಗಾರೆ ಕೆಲಸ ಮಾಡಿ, ನಮ್ಮ ಮನೆ ಬಳಿ ಇರುವ ಸಮುದಾಯ ಭವನದಲ್ಲಿ ಉಳಿದುಕೊಳ್ಳುತ್ತಿದ್ದ. ಮೃತ ಮುದಸಿರ್ ಮಧ್ಯಪಾನ ಮಾಡುತ್ತಿದ್ದ. ಹೊಟೇಲಿನಿಂದ ಊಟ ತಂದು ಊಟ ಮಾಡುತ್ತಿದ್ದ.

**2.** ಈಗ್ಗೆ ಅಂದಾಜು 2–3 ವರ್ಷಗಳ ಹಿಂದೆ ಒಂದು ದಿನ ನಾನು ಪಕ್ಷಿವನಕ್ಕೆ ಹೋಗಿ ವಾಪಸ್ಸು ಬಂದಾಗ ಬೆಳಿಗ್ಗೆ 10 ಗಂಟೆಗೆ ನಮ್ಮ ಮನೆಯ ಬಳಿ ಇರುವ ಸಮುದಾಯದ ಬಳಿ ಜನ ಸೇರಿದ್ದರು. ಆಗ ಅಲ್ಲಿ ಸೇರಿದ್ದವರು ಮುದಸೀರ್ ನ ಕೊಲೆ ಆಗಿದೆ ಎಂದು ಹೇಳಿದರು. ಆದರೆ ಯಾರು ಕೊಲೆ ಮಾಡಿದ್ದಾರೆ ಮತ್ತು ಯಾವ ರೀತಿ ಕೊಲೆ ಮಾಡಿದ್ದಾರೆ ಎಂದು ಹೇಳಿರಲಿಲ್ಲ. ಆ ಕಾಲಕ್ಕೆ ನಾನು ಸಮುದಾಯ ಬವನದ ಬಳಿ ಹೋಗಿಲ್ಲ ಮತ್ತು

ಮುದಾಸಿರ್ ಶವ ನೋಡಿಲ್ಲ. ಕೋರ್ಟ್ ಮುಂದಿರುವ ಆರೋಪಿಯನ್ನು ಈ ಮೊದಲು ನಾನು ಎಲ್ಲಿಯೂ ನೋಡಿಲ್ಲ. ಆರೋಪಿ ಏನು ತಪ್ಪು ಮಾಡಿದ್ದಾನೆಂದು ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**<u>ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

**3.** ಕೋರ್ಟ ಮುಂದಿರುವ ಆರೋಪಿ ಮುದಾಸಿರ್ ನ ಜೊತೆ ಸಮುದಾಯದ ಬಳಿ ಆಗಾಗ ಬರುತ್ತಿದ್ದ ಎಂದರೆ ನಾನು ನೋಡಿಲ್ಲ. ದಿಃ– 06.12.2024 ರಂದು ಮೃತ ಮುದಾಸಿರನು ನಮ್ಮ ಮನೆಯ ಮುಂದೆ ಕ್ಲೀನ್ ಮಾಡಿ 300 ರೂ. ಪಡೆದುಕೊಂಡಿದ್ದ ಎಂದರೆ ಕ್ಲೀನ್ ಮಾಡಿದ್ದು ನಿಜ ಆದರೆ ನಾನು 200 ರೂ. ಕೊಟ್ಟಿದ್ದೆ. ನಂತರ ಮರುದಿನ ನಾನು ಎದ್ದು ನೋಡಿದಾಗ ಸಮುದಾಯದ ಭವನ ಬಳಿ ಜನ ಸೇರಿದ್ದರು ಎಂದರೆ ನಿಜ. ಆಗ ನಾನು ಅಲ್ಲಿಗೆ ಹೋಗಿ ನೋಡಿದಾಗ, ಮುದಾಸಿರ್ ನ ತಲೆ, ಮುಖ, ಅವನ ಚಾಪೆ ಮತ್ತು ಬೆಡ್ ಶೀಟ್ ಎಲ್ಲಾ ರಕ್ತವಾಗಿತ್ತು ಎಂದರೆ ಸರಿಯಲ್ಲ. ಆ ಕಾಲಕ್ಕೆ ಕೋರ್ಟ್ ಮುಂದಿರುವ ಆರೋಪಿ ಸಹ ಪಕ್ಕದಲ್ಲಿಯೇ ಇದ್ದು, ಅವನನ್ನು ಪ್ಲಾಸ್ಟಿಕ್ ಪೈಪಿನಿಂದ ಕಟ್ಟಿಹಾಕಿದ್ದರು ಎಂದರೆ ಸರಿಯಲ್ಲ. ನಾನು ಏನೆಂದು ವಿಚಾರ ಮಾಡಿದಾಗ ಆರೋಪಿ ಮುದಾಸಿರ್ ನೊಂದಿಗೆ ಹಣದ ವಿಚಾರಕ್ಕೆ ಹಾಗೂ ಮುದಾಸಿರ್ ಸ್ಯೆಲ್ಯೂಷನ್ ಕೊಡಲಿಲ್ಲ ಎಂಬ ವಿಚಾರಕ್ಕೆ ಜಗಳ ಮಾಡಿಕೊಂಡಿದ್ದು, ಆರೋಪಿ ಸಿಮೆಂಟ್ ಇಟ್ಟಿಗೆಯನ್ನು ಮುದಾಸಿರ್ ನ ಮೇಲೆ ಎತ್ತಿ ಹಾಕಿ ಸಾಯಿಸಿರುವುದಾಗಿ ಗೊತ್ತಾಯಿತು ಎಂದರೆ

ಸರಿಯಲ್ಲ. ಆ ಕಾಲಕ್ಕೆ ಮುದಾಸಿರ್ ನ ಮನೆಯವರು ಆರೋಪಿಯನ್ನು ಕಟ್ಟಿ ಹಾಕಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ''ದಿಃ-07.12.2025............ ನನ್ನ ಹೇಳಿಕೆಯನ್ನು ನೀಡಿರುತ್ತೇನೆ '' ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-22 ಎಂದು ಗುರುತಿಸಿದೆ. ಈಗ ಆರೋಪಿ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-**

**4.** ಪಾಟೀ ಸವಾಲು ಆರೋಪಿ ಪರ ಇಲ್ಲ

ಮರುವಿಚಾರಣೆಃ- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**